**ಭೂ**ಲೋಕದಲ್ಲಿ ಜನತಾ ದರ್ಶನ ಕಾರ್ಯಕ್ರಮ ಜನಪ್ರಿಯವಾಗಿರುವುದನ್ನು ಗಮನಿಸಿದ ಗಣೇಶ ತಾನೂ ತನ್ನ ಸೆಕ್ರೆಟರಿ ಮೂಷಕರಾಯ್‌ನೊಂದಿಗೆ ದೇವಸ್ಥಾನದಾವರಣದಲ್ಲಿ ಬೀಡು ಬಿಟ್ಟಿರಲಾಗಿ ಭಾದ್ರಪದ ಚತುರ್ಥಿ ಬೆಳ್ಳಂಬೆಳಿಗ್ಗೆಯೇ ಸಾವಿರಾರು ಭಕ್ತಗಣ, ಗಣಪತಿಗೆ ಅಹವಾಲು... ಅಲ್ಲಾಲ್ಲ... 'ಭಕ್ತರ ಬಿನ್ನವತ್ತಳೆ' ಹಿಡಿದು ನಿಂತಿದ್ದಾರೆ. ಆಬಾಲವೃದ್ಧರಾದಿಯಾಗಿ ಎಲ್ಲ ವರ್ಗದ ಭಕ್ತ ಸಮೂಹ ಒಕ್ಕೊರಲಲ್ಲಿ 'ಜೈ ಗಣೇಶ... ವಿಘ್ನ ವಿನಾಶಕ... ಸಂಕಷ್ಟಹರ... ಜೈ ಜೈ' ಎಂದು ಜೈಕಾರ ಹಾಕುತ್ತಿದ್ದಾರೆ. ಅಷ್ಟರಲ್ಲಿ ಪುಟ್ಟ ಬಾಲಕನೊಬ್ಬ ಬಿನ್ನವತ್ತಳೆಯನ್ನು ಗಣೇಶನಿಗೆ ಸಲ್ಲಿಸುತ್ತಾನೆ.

**ಬಾಲಕ:** ಕರೋನಾದಿಂದ ಆನ್‌ಲೈನ್ ಓದು, ಪರೀಕ್ಷೆ, ಎಲ್ಲ ಕಷ್ಟ ಮುಗೀತು ಅಂತ ಈ ವರ್ಷ ಶಾಲೆಗೆ ನಗನಗ್ತಾ ಬಂದರೆ, ಹಿಜಾಬು, ಪಠ್ಯ ರಿಪೇರಿ, ಯೂನಿಫಾರಮ್ಮು, ಶೂ ಸಾಕ್ಸು... ಅಬ್ಬಾಬ್ಬಾ ತಲೆ ಚಿಟ್ ಹಿಡಿಯುವಷ್ಟು ಪ್ರಾಬ್ಲೆಮ್ಸು, ಹೇ ದೇವಾ ನೀನೇ ಅಡೆತಡೆ ದೂರ ಮಾಡಿ ಎಲ್ಲ ಸುಗಮ ಆಗೋಹಾಗೆ ಮಾಡಬೇಕು ದೇವಾ...'



**ಗಣೇಶ:** ನಮ್ಮ ಮೇಲೆ ಅಷ್ಟೊಂದು ಭಕ್ತಿ–ವಿಶ್ವಾಸವೇ?

**ಬಾಲಕ:** ಹೌದೌದು... ಟೀವಿಯಲ್ಲಿ 'ಭೂಕೈಲಾಸ' ಪಿಚ್ಚರ್‌ನಲ್ಲಿ ನೀನು ಬಾಲಗಣೇಶನಾಗಿ ಬಂದು ಉಪಾಯದಿಂದ ಆತ್ಮಲಿಂಗವನ್ನು ರಕ್ಷಿಸಿದಾಗಲೇ ನನಗೆ ಡೆಫಿನಿಟ್ ಆಯ್ತು, ನಮ್ಮಂತಹ ಮಕ್ಕಳ ಸಮಸ್ಯೆಗೆ ನೀನು ಮಾತ್ರ ಪರಿಹಾರ ನೀಡಬಲ್ಲೆ ಅಂತ.

**ಗಣೇಶ:** ಭೇಷ್, ಮೆಚ್ಚಿದೆ. ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳು ಸರಸ್ವತಿ ದೇವಿ ಅವರ ವಿಭಾಗಕ್ಕೆ ಬರುವುದರಿಂದ, ಮಾತೆಯೊಂದಿಗೆ ಮಾತನಾಡುವೆ. ನೀನೊಂದು ಕೆಲಸ ಮಾಡು. ಈ ದೊಡ್ಡ ಗಣೇಶ ದೇವನಿಗೆ ಇಪ್ಪತ್ತೊಂದು ಹುಡುಗರೊಡಗೂಡಿ, ಇಪ್ಪತ್ತೊಂದು ದಿನ, ಇಪ್ಪತ್ತೊಂದು ಗರಿಕೆ, ಸಮರ್ಪಿಸಿ ಇಪ್ಪತ್ತೊಂದು ಬಸ್ಕಿ ಸೇವೆ ಮಾಡು, ನಿಮ್ಮ ಸಮಸ್ಯೆ ಮಾಯವಾಗಿಬಿಡುವುದು.

***

**ಯುವಕ:** ಸ್ವಾಮಿ, ನಾನೊಬ್ಬ ನಿರುದ್ಯೋಗಿ. ಪಿಎಸ್‌ಐ ಆಗ್ಬೇಕು ಅಂತ ಕನಸುಕಂಡು ಲಕ್ಷಾಂತರ ರೂಪಾಯಿ ಲಂಚಕೊಟ್ಟು ಕೈ ಸುಟ್ಕೊಂಡಿದೀನಿ. ದೊಡ್ಡ

## ಭಕ್ತರ ಎದುರು ಪ್ರತ್ಯಕ್ಷನಾದರೆ ಗಣೇಶನ ಎದುರು ಏನೆಲ್ಲ ಕೋರಿಕೆಗಳು ಎದುರಾಗಬಹುದು? ಒಂದೆರಡು ಸ್ಯಾಂಪಲ್ ನೋಡಿ.

ಸ್ಕ್ಯಾಮ್ ಆಗಿರೋ ವಿಚಾರ ತಮಗೆ ತಿಳಿದದ್ದೇ. ದಯವಿಟ್ಟು ದಾರಿ ತೋರ್ಸಿ ದೇವರ ದೇವ'.

**ಗಣೇಶ:** ನೋಡಯ್ಯ ತರುಣಾ, ಲಂಚದಿಂದಲೇ ಜೀವನ ಆರಂಭಿಸಿದ್ರೆ ಲಂಚದಲ್ಲೇ ಮುಳುಗಿ ಏಳ್ಬೇಯಾ. ಆಮೇಲೆ 'ಇಡಿ ಗೀಡಿ' ಅಂತ ರಗಳೆ. ನೋಡ್ತಾಯಿಲ್ಲವೇ ಮೀಡಿಯಾಗಳಲ್ಲಿ? ಅದೇ ದುಡ್ಡಲ್ಲಿ ನಿಂದೇ ಒಂದು ಉದ್ಯೋಗ ಮಾಡಿಕೊಂಡು 'ಗೌರಿ ಗಣೇಶ ಪರಮೇಶ್ವರ', 'ಶಿವ ಶಿವ' ಅಂತ ಹಾಯಾಗಿರಬಹುದಲ್ಲವಾ? (ತನ್ನ ವಾಹನದತ್ತ ನೋಡಿ) ಮೂಷಿಕರಾಯ ಇವನಿಗೆ ಏನುಮಾಡೋದು?

**ಮೂಷಿಕರಾಯ:** ಪಿಎಸ್‌ಐಗಳ ವಿಷಯ ದಂಡಾಧಿಕಾರಿ ಯಮಧರ್ಮರಾಯ ಅವರಿಗೆ ಬರುತ್ತೆ. ಅವ್ರಿಗೆ ಫೋನ್ ಹಚ್ಚಲೇ? ಟ್ರೈ ಮಾಡ್ತೀನಿ (ಸ್ವಲ್ಪ ಸಮಯದ ನಂತರ), ಫೋನ್ ಡೆಡ್ ಆಗಿದೆ. ಬೇರೆ ನಂಬರ್ ಟ್ರೈ ಮಾಡ್ಲಾ?

**ಗಣೇಶ:** ಡೆಡ್ ಆದ ಜೀವಿಗಳ ಜೊತೆ ಅವರ ಫೋನೂ ಡೆಡ್ ಆಗಿರಬೇಕು... ಇರಲಿ, ಆಮೇಲೆ ಒಂದು ಇಮೇಲ್ ಹಾಕಿ ನೋಡೋಣ... ನೆಕ್ಸ್ಟ್.

***

**ಗೃಹಿಣಿ:** ದೇವಾ, ಗಿರಿಜಾ ನಂದನ, ನಾನೊಬ್ಬ ಮಧ್ಯಮ ವರ್ಗದ ಗೃಹಿಣಿ. ಗಂಡ ತಿಂಗಳಿಗೆ ಅಂತ ಒಂದಿಷ್ಟು ದುಡ್ಡು ಕೊಟ್ಟು ಹೋಗಿಬಿಡ್ತಾನೆ. ಮನೆ ನಡಸೋ ಭಾರ ನಮ್ಮದೇ. ಅಡುಗೆ ಮನೆಗೆ ಬಂದ್ರೆ ಸಾಕು ಒಂದೊಂದು ಸಾಮಾನು ಹಾಕೋವಾಗ಼್ೂ ಅವುಗಳ ಬೆಲೆ ನೆನಪಾಗಿ ತಲೆ ತಿರುಗಿ ಹೋಗತ್ತೆ, ಗ್ಯಾಸ್ ಆನ್ ಮಾಡೋಕ್ ಹೋದ್ರಂತೂ ಒಲೆಗಿಂತ ಜೋರಾಗಿ ಹೊಟ್ಟೇನೆ ಉರಿಯುತ್ತೆ. ಮಜ್ಜಿಗೆ ಕುಡ್ದು ಹೊಟ್ಟೆ ತಣ್ಣಗೆ ಮಾಡಿಕೊಳ್ಳೋಣ ಅಂದ್ರೆ ಮಜ್ಜಿಗೆಗೂ ಜಿಎಸ್‌ಟಿ. ಈ ಬೇಲೆ ಏರಿಕೆಗೆ ಏನಾರೂ ಮಾಡು... ಅಷ್ಟೇ ಯಾಕೆ, ನಿನ್ನ ಮಣ್ಣಿನ ವಿಗ್ರಹಗಳ ರೇಟೂ ಏನು ಕಮ್ಮೀನಾ? ಆರಿಂಚಿನ ಗಣೇಶನಿಗೆ ಆರುನೂರು ರೂಪಾಯಿ!

**ಗಣೇಶ:** ಎಷ್ಟು ವರ್ಷಗಳಿಂದ ಕೇಳ್ತಾಯಿದೀನಿ ಈ ಬೆಲೆ ಏರಿಕೆ ಭೂತದ ಬಗ್ಗೆ. ನಂಗೂ ಏನು ಮಾಡೋಕಾಗ್ತಾಯಿಲ್ಲ. ಸಂಪತ್ತಿನ ಒಡತಿ ಲಕ್ಷ್ಮೀದೇವಿಗೆ ಹೇಳಿಬಿಟ್ಟು ನಿನ್ನ ಆದಾಯ ಹೆಚ್ಚಿಸೋ ಹಾಗೆ ಮಾಡಿಸ್ತೀನಿ. ಆಗ ಈ ಬೆಲೆ ಬಗ್ಗೆ ತಲೆ ಕೆಡಿಸ್ಕೊಬೇಕಿಲ್ಲ. ಅಮ್ಮ ಪಾರ್ವತೀನೂ ಹೇಳಿದಾಳೆ; ಮಧ್ಯಮ ವರ್ಗದ ಹೆಂಗಸ್ರ ಬಗ್ಗೆ ಕರುಣೆ ಇರಲಿ ಅಂತ. ಎಷ್ಟೇ ಅಂದ್ರು ನಿಮ್ಮ ಕೈಲಿ ರೆಡಿ ಮಾಡಿರೋ ಕರ್ಜಿಕಾಯಿ, ಮೋದಕ, ಪಾಯಸದ ರುಚಿ ಸ್ವರ್ಗಲೋಕದ ಅಮೃತದಲ್ಲೂ ಇಲ್ಲ ಬಿಡಿ.

**ಗೃಹಿಣಿ:** ಅಷ್ಟು ಮಾಡು ಗಜಾನನ. ಈಗಲೇ ನೈವೇದ್ಯಕ್ಕೆ ರೆಡಿ ಮಾಡ್ತೀನಿ.

***

**ಪುಢಾರಿ:** ಅಡ್ಡಿದ್ದೆ ಲಂಬೋದರಾ... ಅಡ್ಡಿದ್ದೆ... ನಾನು ಒಂದೇ ಒಂದು ವರ ಕೇಳ್ತೀನಿ – ಮುಂದಿನ ಸಿಎಂ ನಾನೇ ಆಗೋ ತರಹ ವರ ಕೊಡು ವರಪ್ರದ ವಿನಾಯಕಾ...

**ಗಣೇಶ:** (ಮೂಷಿಕರಾಯನೊಂದಿಗೆ ಪಿಸುಗುಡುತ್ತ) ಏನಪ್ಪಾ ಇದು ಮುಂದಿನ ಸಿಎಂ?

**ಮೂಷಿಕರಾಯ:** (ಮೆಲುದನಿಯಲ್ಲಿ) ಈಗ ಸಿಎಂ ರೇಸು ಆರಂಭ ಆಗಿದೆ – ಹತ್ತಾರು ಜನ 'ನಾನು ಸಿಎಂ', 'ನಾನೇ ಸಿಎಂ' ಅಂತ ಟವಲ್ ಹಾಕ್ತಿದ್ದರಲ್ಲ ದೇವ... ಮೊನ್ನೆ ನೀವು ಹೇಳ್ತಾಯಿದ್ರಲ್ಲ ಅದೇ ಕೇಸು...

**ಗಣೇಶ:** ಗೊತ್ತಾಯ್ತು... ಹ್ಯಾಂಡಲ್ ಮಾಡ್ತೀನಿ ಇರು. ಪುಢಾರಿಯ ಕಡೆ ತಿರುಗಿ – ಈ ವಿಚಾರ ಬಹಿರಂಗವಾಗಿ ಮಾತಾಡೋಕಾಗತ್ತೆಯೇ? ಅಲ್ಲದೆ ಇದು ಸದಾ ಇರೋ ಸಮಸ್ಯೆಯೇ. ಒಂದು ಸಿಎಂ ಪೋಸ್ಟು, ಇಷ್ಟು ಆಕಾಂಕ್ಷಿಗಳು... ನಿಮ್ಮ ಹಿರಿಯ ನಾಯಕರನ್ನ ಕಳಿಸಿ, ಈ ಮುಂದಿನ ಸಿಎಂ ಜೊತೆಗೆ ವಿಧಾನಸೌಧದ ಮೇಲಿನ ಮಹಡಿಗೊಬ್ಬರು 'ಮೇಲಿನ ಸಿಎಂ', ಎಡಗಡೆ ವಿಂಗ್‌ಗೆ 'ಎಡಗಡೆ ಸಿಎಂ', ಬಲಗಡೆ ವಿಂಗ್‌ಗೆ 'ಬಲಗಡೆ ಸಿಎಂ', ಮತ್ತೆ ಬೇಸ್‌ಮೆಂಟ್‌ಗೆ ಒಬ್ಬರು 'ಬೇಸ್‌ಮೆಂಟ್ ಸಿಎಂ' ಹೀಗೆ ಐದಾರು ಸಿಎಂ ಮಾಡಬಹುದು. ನೆಕ್ಸ್ಟ್...

***

**ಗಣೇಶ:** ಟೈಮ್ ಆಯ್ತು ಅನ್ಸುತ್ತೆ, ಹೊರಡೋಣವೆ ಮೂಷಿಕರಾಯ?

**ಮೂಷಿಕರಾಯ:** ಅಲ್ಲಿ ಒಬ್ಬರು ಹಿರಿಯರು ತುಂಬಾ ಹೊತ್ತಿಂದಾ ಕಾಯ್ತಾಯಿದ್ದಂಗಿದೆ...

**ಹಿರಿಯ ನಾಗರಿಕ:** ನನ್ನ ಹೆಸರು ಚಿರಂಜೀವಿ ಅಂತ. ನಮ್ಮನ್ನ ಯಾರೂ ಕೇಳವ್ರೆ ಇಲ್ಲ, ಈಗ ನೋಡಿ ನೀವೂ ಹೊರಟುಬಿಟ್ಟಿದ್ದಿರಿ, ಥ್ಯಾಂಕ್ಸ್ ಟು ಮೂಷಿಕರಾಯ. ವಿಷಯಕ್ಕೆ ಬರ್ತೀನಿ...

**ಮೂಷಿಕರಾಯ:** ಬನ್ನಿ ಬೇಗ, ಲೇಟ್ ಆಗತ್ತಾ ಇದೆ.

**ಹಿರಿಯ ನಾಗರಿಕ:** ಬಡ್ಡಿ ರೇಟು ಇಳಿತಾಯಿದೆ. ಬೆಲೆಗಳು ಏರುತ್ತಲೇ ಇವೆ. ಬಡ್ಡಿ ಮೇಲೇ ಜೀವನ ನಮ್ಮದು. ಈ ಮಧ್ಯೆ ಟ್ಯಾಕ್ಸ್‌ನವರು ಸಣ್ಣ ಉಳಿತಾಯದವರನ್ನೂ ಬಿಡ್ತಾಯಿಲ್ಲ. ಯಾತ್ರೆ, ಪ್ರವಾಸ ಮಾಡೋಣ ಅಂದ್ರೆ ರೈಲ್ವೆ ರಿಯಾಯತಿನೂ ಕಿತ್ತುಕೊಂಡ್ಬಿಟ್ರು. ಆರೋಗ್ಯ ಸಮಸ್ಯೆಗಳು ನಿರಂತರ. ವೃದ್ಧಾಪ್ಯವೇ ಒಂದು ಶಿಕ್ಷೆ. ಅದರ ಮೇಲೆ ಬರೆ ಕೊಟ್ಟಂಗೆ ಕಾಯಿಲೆಗಳು. ಇನ್ನು ಮಕ್ಕಳು–ಸೊಸೆಯಂದಿರು... ನಮ್ಮನ್ನ ಬೇಗ ಕರ್ಕೊಂಡು ಬಿಡಪ್ಪ ಸಂಕಟಹರ ಗಣೇಶ ಅಂತ ಕೇಳೋಕೆ ಬಂದೆ.

**ಗಣೇಶ:** ನೀವೇ ತಾಳ್ಮೆ ಕಳೆದುಕೊಂಡ್ರೆ ಹ್ಯಾಗೆ? ಬಡ್ಡಿ ಯೋಚನೆ ಬಿಡಿ – ಹಳೆ ಬೇರು ನೀವು, ನೀವಿದ್ರೇ ಮರ ಸೊಬಗು.

ಢಣ್... ಢಣ್ ಢಣ್... ಗಂಟೆ ಸದ್ದು. ಜಾಗಟೆ, ತಾಳದ ಸದ್ದು. ಜಯ್ ದೇವ... ಜಯ ಗಣೇಶ... ಎನ್ನುವ ಘೋಷಣೆಗಳ ನಡುವೆ ಗಣೇಶ ಅಂತರ್ಧಾನನಾಗುವನು.

ಪ್ರತಿಕ್ರಿಯಿಸಿ: feedback@sudha.co.in